(ಇ) ಕಣಿಗಲ್ ತಾಲ್ಲೂಕಿನ ಅಂಚೆಪಾಳ್ಯ ಕೈಗಾರಿಕಾ ಪ್ರದೇಶದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ನೀಗಲು, ಒಂದು ೬.೩ ಎಂ.ವಿ.ಎ. ಸಾಮರ್ಥ್ಯದ ೬೬/೧೧ ಕೆ. ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಲು ಮಂಡಳಿಯು ಯೋಚಿಸಿದೆ. ಈ ಕಾಮಗಾರಿಯನ್ನು ೮ನೇ ಪಂಚವಾರ್ಷಿಕ ಯೋಜನೆ ಅವಧಿಯ ಕಾರ್ಯಗಳಲ್ಲಿ ಸೇರಿಸಲಾಗಿದೆ.

ಶ್ರೀ ಹೆಚ್. ಎಂ. ರೇವಣ್ಣ.—ಮೊದಲನೆಯದಾಗಿ, ಕಣಿಗಲ್ ತಾಲ್ಲೂಕಿನಲ್ಲಿರುವ ಜಾನ್‌ಸನ್ ಮತ್ತು ಜಾನ್‌ಸನ್ ಕಂಪನಿಗೆ ವಿದ್ಯುತ್ ಸಂಪರ್ಕವಿದಗಿಸಲಾಗಿದೆಯೇ ಎಂದು ಹೇಳಿದ್ದಕ್ಕೆ ಹಾದುಎಂದು ಹೇಳಿದ್ದೀರಿ. ಆದರೆ ಮಾಗಡಿಯಲ್ಲಿ ನಮ್ಮ ತಾಲ್ಲೂಕಿನ ಜೊಮೆಷ್ಟಿಕ್ ಕರೆಂಟನ್ನು ಪಕ್ಕದ ತಾಲ್ಲೂಕಾದ ಕಣಿಗಲ್‌ನಲ್ಲಿ ಇಂಡಸ್ಟ್ರಿಯಲ್ ಏರಿಯಾಗೆ ಕೊಟ್ಟಿರುವುದರಿಂದ ನಮ್ಮ ತಾಲ್ಲೂಕಿನಲ್ಲಿ ಬಹಳ ತೊಂದರೆಯಾಗುತ್ತಿದೆ, ಪಂಪ್‌ಸೆಟ್ಸ್ ಎಲ್ಲಾ ಕೆಡುತ್ತಿದೆ, ರೈತರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಅಲ್ಲಿಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಬೇರೆ ವ್ಯವಸ್ಥೆಮಾಡಿಕೊಟ್ಟು, ನಮ್ಮ ರೈತರಿಗೆ ಸಹಾಯ ಮಾಡಿಕೊಡಬೇಕು. ನಮ್ಮ ತಾಲ್ಲೂಕಿನ ರೈತರಿಗೋಸ್ಕರ ಇದ್ದ ನಮ್ಮಕರೆಂಟನ್ನು ಅವರಿಗೆ ಕೊಟ್ಟಿರುವುದನ್ನು ತಪ್ಪಿಸಬೇಕು. ಮತ್ತೆ ಹೊಸದಾಗಿ ಐ. ಪಿ. ಸೆಟ್ಟುಗಳಿಗೆ ಅರ್ಜಿ ಕೊಟ್ಟು ೯೫ಜನ ಕಾಯುತ್ತಾ ಇದ್ದಾರೆ. ಅವರಿಗೆ ವಿದ್ಯುಚ್ಛಕ್ತಿ ಒದಗಿಸಿಕೊಡುವುದಕೋಸ್ಕರ ತಾವು ನಮ್ಮ ತಾಲ್ಲೂಕಿಗೆ ಆದ್ಯತೆ ಕೊಡಬೇಕು ಎಂದೂ ನಾನು ಕೇಳಿಕೊಳ್ಳುತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಈಗ ಆ ಕ್ಷೇತ್ರದಲ್ಲಿ ಕೈಗಾರಿಕೆ ಬಹಳ ಕಡಿಮೆ ಇದೆ. ಇದು ಒಂದೇ ದೊಡ್ಡ ಕೈಗಾರಿಕೆ ಬಂದಿದೆ. ಅದು ೬೬೦ ಕೆ.ವಿ.ಯದು. ಅಂತೂ ಅಲ್ಲಿನವರಿಗೆ ತೊಂದರೆಯಾಗ ಬಾರದು ಎಂಬ ಉದ್ದೇಶದಿಂದ ಅಲ್ಲಿ ಒಂದು ಸಬ್ ಸ್ಟೇಷನ್‌ನನ್ನು ೭೮ ಲಕ್ಷ ರೂಪಾಯಿಗಳಲ್ಲಿ ಮಾಡ ಬೇಕು ಎಂದು ಇದ್ದೇವೆ. ಮತ್ತೆ ೬೬ ಕೆ.ವಿ. ಲೈನನ್ನು ಎಳೆಯುವಂಥ ಒಂದು ಯೋಚನೆ ಸರ್ಕಾರಕ್ಕೆ ಇದೆ.

ಶ್ರೀ ಎಚ್.ಎಂ. ರೇವಣ್ಣ.—ಸನ್ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಕೇಳಿಕೊಂಡೆ. ಈಗಿರತಕ್ಕ ೯೫ ಐ.ಪಿ. ಸೆಟ್‌ನವರಿಗೆ ಕರೆಂಟ್ ಕೊಡದೆ ಇರುವುದರ ಬಗ್ಗೆ ತಾವು ಕ್ರಮ ತೆಗೆದುಕೊಂಡು ನಮ್ಮ ರೈತರಿಗೆ ಐ.ಪಿ. ಸೆಟ್‌ಗೆ ಕರೆಂಟ್ ಕೊಟ್ಟು ಅವರು ಬೆಳೆ ಬೆಳೆಯುವುದಕ್ಕೆ ಸಹಾಯ ಮಾಡಬೇಕು ಎಂದೂ ನಾನು ಮೊದಲು ಕೇಳಿದೆ, ಆದಕ್ಕೆ ಉತ್ತರ ಬಂದಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ಪಂಪ್‌ಸೆಟ್‌ಗೂ ಈ ಫ್ಯಾಕ್ಟರಿಗೂ ಕರೆಂಟ್‌ನಲ್ಲಿ ಸಂಬಂಧ ಇರಬೇಕು. ಆದರೆ ಪಂಪ್‌ಸೆಟ್‌ಗೆ ಕರೆಂಟ್ ಕೊಡಬೇಕು ಎನ್ನುವುದೂ ಸರ್ಕಾರದ ಉದ್ದೇಶ ಇದೆ. ಈ ವರ್ಷ ಸಹ ನಲವತ್ತು ಸಾವಿರ ಪಂಪ್‌ಸೆಟ್ಸ್‌ಗೆ ವಿದ್ಯುಚ್ಛಕ್ತಿ ಕೊಡಬೇಕು ಎಂದು ಇದೆ. ಆ ಸಮಯದಲ್ಲಿ ನಿಮ್ಮ ಒಂದು ಕ್ಷೇತ್ರವನ್ನೂ ಸಹ ಗಮನದಲ್ಲಿ ತೆಗೆದುಕೊಳ್ಳುತ್ತೇವೆ.

ವಿದ್ಯುಚ್ಛಕ್ತಿ ಉಪ-ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ

೫೯೧ ಶ್ರೀ ಬಿ ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ತೆಲಗಿ, ಹಲವಾಗಲು, ಕಂಬತ್ತಹಳ್ಳಿಯಲ್ಲಿ ವಿದ್ಯುತ್ ಉಪ-ಕೇಂದ್ರ ಸ್ಥಾಪಿಸುವ ಬಗ್ಗೆ ಈ ಹಿಂದೆ ಸರ್ಕಾರಕ್ಕೆ ಪ್ರಶ್ನೆ ಮೂಲಕ ಕೋರಿಲ್ಲವೇ.

(ಆ) ಹಾಗಿದ್ದರೆ ತಕ್ಷಣ ಮೂರು ಉಪ-ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಇರುವ ಅಡ್ಡಿ ಆತಂಕಗಳು ಯಾವುವು ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

(ಅ) ಮತ್ತು (ಆ) ತೆಲಗಿಯಲ್ಲಿ ೬೬ ಕೆ.ವಿ. ಸಬ್ ಸ್ಟೇಷನ್ ಅನ್ನು ೬.೩ ಎಂ.ವಿ.ಎ. ಸಾಮರ್ಥ್ಯವುಳ್ಳ ಒಂದು ಟ್ರಾನ್ಸ್‌ಫಾರ್ಮರ್‌ವೊಂದಿಗೆ ಸ್ಥಾಪನೆ ಮಾಡಲು ೮ನೇ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳಲ್ಲಿ ಸೇರಿಸಲಾಗಿದೆ ಮತ್ತು ಈ ಕೆಲಸವನ್ನು ಈ ಸಾಲಿನ (೧೯೯೦-೯೧) ವಾರ್ಷಿಕ ಯೋಜನೆಯಲ್ಲಿ ಕಾರ್ಯಗತಗೊಳಿಸಲು ಅಗತ್ಯವಿರುವ ಹಣವನ್ನು ಸಹ ಆಯವ್ಯಯದಲ್ಲಿ ಒದಗಿಸಲಾಗಿದೆ.

ಪುನಬಗಟ್ಟ ಮತ್ತು ಹಲವಾಗಲು ಗ್ರಾಮಗಳಲ್ಲಿ ವಿದ್ಯುತ್ ಉಪ-ಕೇಂದ್ರ ಸ್ಥಾಪಿಸಲು ತಾಂತ್ರಿಕ ಸಾಧ್ಯತೆಗಳನ್ನು ಅಧ್ಯಯನ ಮಾಡಲಾಗುತ್ತಿದೆ.

ಏನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಕಂಬತಹಳ್ಳಿ ಗ್ರಾಮದಲ್ಲಿ ಉಪ-ಕೇಂದ್ರ ಸ್ಥಾಪಿಸಿದ ಪ್ರಸ್ತಾಪವಿರುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಸ್ವಾಮಿ, ಹರಪನಹಳ್ಳಿ ತಾಲ್ಲೂಕಿನಲ್ಲಿ ಇಂಗ್ಲೀಷಿನವರ ಕಾಲದಲ್ಲಿ ಒಂದೇ ಒಂದು ಸ್ಟೇಷನ್ ಆಗಿತ್ತು. ನಮಗೆ ಸ್ವಾತಂತ್ರ್ಯ ಬಂದು ೪೦-೪೫ ವರ್ಷಗಳಾದರೂ ಕೂಡ ಇವತ್ತಿಗೂ ಅಲ್ಲಿ ಒಂದು ಸಬ್‌ಸ್ಟೇಷನ್ ಇಲ್ಲಅಲ್ಲಿ ಇರತಕ್ಕ ಪಂಪ್‌ಸೆಟ್ಸ್‌ಗೆ ಇದರಿಂದ ತೊಂದರೆಯಾಗಿದೆ. ಅಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ತೆಲಗಿಯಲ್ಲಿ ಒಂದು ಸಬ್‌ಸ್ಟೇಷನ್ ಮಾಡುತ್ತೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಹಲವಾಗಲು ಮತ್ತು ಕಂಬತ್ತಹಳ್ಳಿಗೆ ಎರಡು ಸಬ್‌ಸ್ಟೇಷನ್‌ಗಳನ್ನು ಮಾಡಿಕೊಡ ಬೇಕು ಎಂದೂ ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ.—ಅಲ್ಲಿ ಸಬ್‌ಸ್ಟೇಷನ್ ೭೮ ಲಕ್ಷದ ೬೫ ಸಾವಿರ ರೂಪಾಯಿಗಳಲ್ಲಿ ಮಾಡಲು ೧೯೬೦-೬೧ರ ಬಜೆಟ್‌ನಲ್ಲಿ ಸಹ ಇಟ್ಟಿದ್ದೇವೆ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಕಂಬತ್ತಹಳ್ಳಿ ಮತ್ತು ಹಲವಾಗಲುಗಳಲ್ಲಿ ಪಂಪ್‌ಸೆಟ್ಸ್ ಇವೆ, ಬಹಳ ತೊಂದರೆಯಾಗುತ್ತಿದೆ. ದಯವಿಮಾಡಿ ತಾವು ಈ ಎರಡು ಹಳ್ಳಿಗಳಲ್ಲಿ ಎರಡು ಸಬ್ ಸ್ಟೇಷನ್‌ಗಳನ್ನು ಮಾಡಲು ಈ ಸಲ ಅಥವಾ ಮುಂದಿನ ಸಲವಾದರೂ ಬಜೆಟ್‌ನಲ್ಲಿ ಸೇರಿಸಿ ಇದಕ್ಕೆ ಮಂಜೂರಾತಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್, ಎಂ. ಯಾಹ್ಯಾ.—ಎರಡು ಹಳ್ಳಿಗಳಲ್ಲಿ ಮಾಡುವುಂಥ ಪ್ರಪೋಸಲನ್ನು ನಾವು ವಿಕ್ಸಮಿನ್ ಮಾಡುತ್ತಾ ಇದ್ದೇವೆ. ಇನ್ನೊಂದು ಹಳ್ಳಿಗೆ ಸ್ವಲ್ಪ ಕಷ್ಟ ಇವೆ.

ಹಾಸನ ನಗರದ ಕಿಂಕೋ ಫ್ಯಾಕ್ಟರಿಯ ಬಗ್ಗೆ

೬೭೭. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೭-೫೮, ೧೯೫೮-೫೯ ಮತ್ತು ೧೯೫೯ರಲ್ಲಿ ಹಾಸನ ಪಟ್ಟಣದ ಕಿಂಕೋ ಫ್ಯಾಕ್ಟರಿಗೆ ಆದ ನಷ್ಟ ಎಷ್ಟು ? (ವರ್ಷವಾರು ಮಾಹಿತಿ ಕೊಡುವುದು).

ಆ) ಈ ರೀತಿ ನಷ್ಟವಾಗಲು ಕಾರಣಗಳೇನು ?

ಇ) ಈ ಫ್ಯಾಕ್ಟರಿಯು ಲಾಭದಾಯಕವಾಗಿ ನಡೆಯುವಂತಾಗಲು ಏನು ಕಾರ್ಯಕ್ರಮ ತೆಗೆದುಕೊಳ್ಳಲಿದೆ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಹಾಗೂ ವರ್ಕ್ಸ್ ಸಚಿವರು).—

ಅ) ಹಾಸನದಲ್ಲಿರುವ ಕಿಂಕೋ ಕಾರ್ಖಾನೆಯು ೧೯೫೭-೫೮, ೫೮-೫೯ ಮತ್ತು ೧೯೫೯-೬೦ರಲ್ಲಿ ಈ ಕೆಳಕಂಡಂತೆ ನಷ್ಟ ಅನುಭವಿಸಿದೆ :

ವರ್ಷ	ಲಕ್ಷ ರೂ. ಗಳಲ್ಲಿ
೧೯೫೭-೫೮	೫೩.೭೨
೧೯೫೮-೫೯	೧೨.೨೨
೧೯೫೯-೬೦	೬೨.೦೦

ಆ) ಕಂಪನಿಯು ಈ ಕೆಳಕಂಡ ಕಾರಣಗಳಿಂದ ನಷ್ಟವನ್ನು ಅನುಭವಿಸಿದೆ.

೧) ಸಾಕಷ್ಟು ಕೆಲಸವಿಲ್ಲದ ಪ್ರಯುಕ್ತ ಇರುವ ಪೂರ್ಣ ಪ್ರಮಾಣದ ಯಂತ್ರಸ್ಥಾವರ ಶಕ್ತಿಯನ್ನು ಬಳಸಲಾಗದ ಕಾರಣ.

೨) ಅಗತ್ಯಕ್ಕಿಂತ ಹೆಚ್ಚಿನ ಕಾರ್ಮಿಕರು ಹಾಗೂ ಅವರ ಹೆಚ್ಚಿನ ವೇತನದ ಕಾರಣ.

೩) ಕ್ಯೋಢಿಕೃತ ನಷ್ಟದಿಂದಾಗಿ ಅತಿ ಹೆಚ್ಚಿನ ಸಾಲದ ಹೊರೆ ಉಂಟಾಗಿದೆ.

ಇ) ೧) ಕಂಪನಿಯು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಈ ಕಂಪನಿಗೆ ಸಾಕಷ್ಟು ಚಾಸಿಗಳನ್ನು ಒದಗಿಸುವಂತೆ ಕೆ.ಎಸ್.ಆರ್.ಟಿ.ಸಿ.ಯನ್ನು ಕೋರಲಾಗಿದೆ.